ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೦೬**

# ಕರ್ನಾಟಕ ವಿಧಾನಸಭೆ

**ಹದಿನಾರನೇ ವಿಧಾನಸಭೆ**

**ಏಳನೇ ಅಧಿವೇಶನ**

**ಮಂಗಳವಾರ, ದಿನಾಂಕ: ೧೯ನೇ ಆಗಸ್ಟ್, ೨೦೨೫**

---

## ಸಮೂಹ – 'ಆ - B'

೧. ಮಾನ್ಯ ಮುಖ್ಯಮಂತ್ರಿಗಳು

೨. ಮಾನ್ಯ ಉಪ ಮುಖ್ಯಮಂತ್ರಿಗಳು

೩. ಮಾನ್ಯ ಗೃಹ ಸಚಿವರು

೪. ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

೫. ಮಾನ್ಯ ಅಬಕಾರಿ ಸಚಿವರು

೬. ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

---

## ನೂತನ ಉಪ ಕಾರಾಗೃಹ

**ಶ್ರೀ ಶಿವಲಿಂಗೇಗೌಡ ಕೆ ಎಂ (ಅರಸೀಕೆರೆ) –**

೭೬ (೧೪೮೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅರಸೀಕೆರೆಯಲ್ಲಿ ನೂತನ ಉಪ ಕಾರಾಗೃಹ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ , ನೂತನ ಉಪ ಕಾರಾಗೃಹ ಯಾವಾಗ ಉದ್ಘಾಟನೆ ಆಗಿದೆ ; (ಮಾಹಿತಿ ನೀಡುವುದು)

(ಇ) ಉದ್ಘಾಟನೆ ಆಗಿ ಇಷ್ಟು ವರ್ಷಗಳು ಕಳೆದರೂ ಅಪರಾಧಿ/ಖೈದಿಗಳನ್ನು ಸದರಿ ಕಾರಾಗೃಹಕ್ಕೆ ಸ್ಥಳಾಂತರ ಮಾಡದಿರಲು ಕಾರಣವೇನು ; ಹಾಗಿದ್ದಲ್ಲಿ , ಯಾವಾಗ ಕ್ರಮ ಕೈಗೊಳ್ಳಲಾಗುವುದು ?

## ಕಬಿನಿ ಬಲದಂಡೆ ನಾಲೆಯ ಅಭಿವೃದ್ಧಿ

**ಶ್ರೀ ಕೃಷ್ಣಮೂರ್ತಿ ಎ ಆರ್ (ಕೊಳ್ಳೇಗಾಲ) –**

೭೭ (೧೮೬೮) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಬಿನಿ ಬಲದಂಡೆ ನಾಲೆಯ ಸರಪಳಿ ೦.೦೦ ಕಿ.ಮೀ ನಿಂದ ೧೪೦.೦೦ ರವರೆಗೆ ಅಭಿವೃದ್ಧಿಪಡಿಸುವ ಕಾಮಗಾರಿ ಹಾಗೂ ಸರಪಳಿ ೧೪೦.೦೦ ರಿಂದ ೧೮೦.೦೦ ವರೆಗೆ ೫೦೦.೦೦ ಲಕ್ಷ ರೂ.ಗಳ Remodelling ಕಾಮಗಾರಿಯನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು ; (ವಿವರ ನೀಡುವುದು)

(ಆ) ೦.೦೦ –೧೪೦.೦೦ ಕಿ.ಮೀ ಅಭಿವೃದ್ಧಿ ಕಾಮಗಾರಿ ಹಾಗೂ ೧೪೦.೦೦–೧೮೦.೦೦ ಕಿ.ಮೀ ಮರುಗಟ್ಟಿಗೆ (Remodelling) ಕಾಮಗಾರಿಗಳು ಯಾವ ಕಾಲಮಿತಿಯಲ್ಲಿ ಪ್ರಾರಂಭವಾಗಿ ಪೂರ್ಣಗೊಳ್ಳಲಿದೆ ; ಅದರ ಪ್ರಮುಖ ಹಂತಗಳು ಯಾವುವು ;

(ಇ) ಈ ಪ್ರಸ್ತಾವನೆಯ ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್) ಮತ್ತು ಮಾಡಿದ ಅಂದಾಜು ವೆಚ್ಚ ಹಾಗೂ ಪ್ರಗತಿಯ ಸ್ಥಿತಿ ಮತ್ತು ಕಾಮಗಾರಿಗಳು ಪೂರ್ಣಗೊಳ್ಳುವ ಹಂತಗಳ ಮಾಹಿತಿ ನೀಡುವುದು ?

## ಕೆರೆಗೆ ನೀರು ತುಂಬಿಸುವುದು

**ಶ್ರೀ ಕಟಕದೊಂಡ ವಿಠ್ಠಲ್ ದೊಂಡಿಬಾ (ನಾಗಠಾಣ) –**

೭೮ (೧೦೬೬) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ ಜಿಲ್ಲೆಯ ಚಡಚಣ ತಾಲ್ಲೂಕಿನಲ್ಲಿ ಬರುವ ಮಹತ್ವಾಕಾಂಕ್ಷಿ ಸಂಖ(ಹೊಳೆ ಸಂಖ)ನ ಕೆರೆಗೆ ನೀರು ತುಂಬಿಸುವ ಯೋಜನೆ ಪ್ರಸ್ತುತ ಸರ್ಕಾರದ ಯಾವ ಹಂತದಲ್ಲಿದೆ ;

(ಆ) ಅತ್ಯಂತ ಹಿಂದುಳಿದ ಪ್ರದೇಶವಾಗಿರುವ ಮತ್ತು ಅತೀ ಕಡಿಮೆ ಪ್ರಮಾಣದಲ್ಲಿ ಮಳೆಯಾಗುವ ಈ ಭಾಗದಲ್ಲಿ ಸಾರ್ವಜನಿಕರಿಗೆ ಹಾಗೂ ಜನ–ಜಾನುವಾರುಗಳಿಗೆ ನೀರಿಗಾಗಿ ಹಾಹಾಕಾರವಿರುವುದು ನಿಜವಲ್ಲವೇ ;

(ಇ) ಹಾಗಿದ್ದಲ್ಲಿ , ಈ ಕೆರೆಗೆ ನೀರು ತುಂಬಿಸಿ ಅಲ್ಲಿನ ಜನ–ಜಾನುವಾರುಗಳಿಗೆ ನೀರು ಒದಗಿಸುವಲ್ಲಿ ಸರ್ಕಾರವು ಈವರೆಗೆ ಕೈಗೊಂಡ ಕ್ರಮಗಳಾವುವು ;

(ಈ) ಈ ಯೋಜನೆ ಯಾವ ಕಾಲಮಿತಿಯಲ್ಲಿ ಪೂರ್ಣಗೊಳ್ಳುವುದು ?

## ಹೊಸ ತಾಲ್ಲೂಕು ಕಛೇರಿಗಳು

**ಶ್ರೀ ಬಸವರಾಜ ಮತ್ತಿಮೂಡ್ (ಗುಲ್ಬರ್ಗಾ ಗ್ರಾಮಾಂತರ) –**

೭೯ (೧೮೫೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೊಸ ತಾಲ್ಲೂಕುಗಳ ರಚನೆಯಾದ ನಂತರ, ಈ ತಾಲ್ಲೂಕು ಕಛೇರಿಗಳಿಗೆ ಅಗತ್ಯ ಸಿಬ್ಬಂದಿಗಳ ನೇಮಕ ಮಾಡಲಾಗಿದೆಯೇ; ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಮಾಹಿತಿ ನೀಡುವುದು)

(ಆ) ಕಲಬುರಗಿ ಗ್ರಾಮೀಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಹಬಾದ್ ಮತ್ತು ಕಮಲಾಪುರ ತಾಲ್ಲೂಕು ಕೇಂದ್ರಗಳಲ್ಲಿ ಹೊಸ ತಾಲ್ಲೂಕು ಕಛೇರಿಗಳನ್ನು ಸ್ಥಾಪಿಸುವ ಪ್ರಸ್ತಾವನೆಗಳು ಸರ್ಕಾರದ ಗಮನಕ್ಕೆ ಬಂದಿವೆಯೇ ;

(ಇ) ಬಂದಿದ್ದಲ್ಲಿ, ಈ ಕಛೇರಿಗಳನ್ನು ಪ್ರಾರಂಭಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ; (ವಿವರ ಒದಗಿಸುವುದು)

(ಈ) ಈ ತಾಲ್ಲೂಕು ಕೇಂದ್ರಗಳಲ್ಲಿ ಯಾವ ಯಾವ ಕಛೇರಿಗಳನ್ನು ಪ್ರಾರಂಭಿಸಲಾಗಿದೆ ; ಬಾಕಿ ಉಳಿದ ಕಛೇರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು ? (ವಿವರ ಒದಗಿಸುವುದು)

## ಮೆಟ್ರೋ ರೈಲು ಸೇವೆ ವಿಸ್ತರಿಸುವುದು

**ಶ್ರೀ ಶಿವಣ್ಣ ಬಿ (ಆನೇಕಲ್) –**

೮೦ (೧೯೭೭) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆನೇಕಲ್ ತಾಲ್ಲೂಕು ಬೊಮ್ಮಸಂದ್ರದಿಂದ ಅತ್ತಿಬೆಲೆವರೆಗೆ ಮೆಟ್ರೋ ರೈಲು ಸೇವೆ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; (ಪೂರ್ಣ ಮಾಹಿತಿ ನೀಡುವುದು)

(ಆ) ಈ ಮಾರ್ಗದ ಮೆಟ್ರೋ ರೈಲು ಸೇವೆ ವಿಸ್ತರಿಸುವ ಕಾಮಗಾರಿಯನ್ನು ಯಾವಾಗ ಆರಂಭಿಸಲಾಗುವುದು ? (ಪೂರ್ಣ ಮಾಹಿತಿ ನೀಡುವುದು)

## ಅನುದಾನದ ವಿವರ

**ಶ್ರೀ ಪುಟ್ಟರಂಗಶೆಟ್ಟಿ ಸಿ (ಚಾಮರಾಜನಗರ) –**

೮೧ (೭೮೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಾಮರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ಮಂಜೂರಾದ ಅನುದಾನ ಎಷ್ಟು ;

(ಆ) ೨೦೨೫–೨೬ನೇ ಸಾಲಿನಲ್ಲಿ ಈ ಕ್ಷೇತ್ರಕ್ಕೆ ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಲು ಯಾವ ಕ್ರಮ ಕೈಗೊಂಡಿದೆ ;

(ಇ) ಅನುದಾನ ಬಿಡುಗಡೆ ಮಾಡಲು ಇಲಾಖೆಗೆ ಈ ಕ್ಷೇತ್ರದಿಂದ ಬಂದಿರುವ ಪ್ರಸ್ತಾವನೆಗಳು ಯಾವುವು ; ಪ್ರಸ್ತುತ ಈ ಪ್ರಸ್ತಾವನೆಗಳು ಯಾವ ಹಂತದಲ್ಲಿವೆ ;

(ಈ) ಪ್ರವಾಸೋದ್ಯಮ ಇಲಾಖೆಗೆ ಒಳಪಟ್ಟ ಪ್ರದೇಶಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ೨೦೨೪–೨೫ ನೇ ಸಾಲಿನಲ್ಲಿ ಸರ್ಕಾರದಿಂದ ಮಂಜೂರಾದ ಅನುದಾನವೆಷ್ಟು ?

## ಬೆಣ್ಣೆ ಹಳ್ಳ ಮತ್ತು ಮಾಸ್ತಿ ಹಳ್ಳಗಳ ಪ್ರವಾಹ ತಡೆ

**ಶ್ರೀ ಪಾಟೀಲ್ ಎಂ ಆರ್ (ಕುಂದಗೋಳ) –**

೮೨ (೧೦೮೦) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನಲ್ಲಿ ಹರಿಯುವ ಬೆಣ್ಣೆ ಮತ್ತು ಮಾಸ್ತಿ ಹಳ್ಳಗಳ ಪ್ರವಾಹದಿಂದ ರೈತರಿಗೆ ತೀವ್ರ ತೊಂದರೆಯಾಗುತ್ತಿದ್ದು,

ಕಳೆದ ತಿಂಗಳು ಉಂಟಾದ ಪ್ರವಾಹದಲ್ಲಿ ಹಂಚಿನಾಳ ಗ್ರಾಮದ ಸಮೀಪ ರೈತನೋರ್ವ ಟ್ರ್ಯಾಕ್ಟರ್ ಸಮೇತ ಹಳ್ಳದಲ್ಲಿ ಕೊಚ್ಚಿಹೋಗಿ ಮೃತನಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕುಂದಗೋಳ ತಾಲ್ಲೂಕಿನಲ್ಲಿ ಹರಿಯುವ ಈ ಹಳ್ಳಗಳ ಅಗಲೀಕರಣ ಮತ್ತು ಹೂಳು ತೆಗೆದು ಪ್ರವಾಹ ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಈ ಹಳ್ಳಗಳ ಪ್ರವಾಹ ನಿಯಂತ್ರಣಕ್ಕೆ ಸರ್ಕಾರ ರೂಪಿಸಿರುವ ಯೋಜನೆಗಳಾವುವು ; ರೂಪಿಸದಿದ್ದಲ್ಲಿ ಕಾರಣಗಳೇನು ; (ಮಾಹಿತಿ ಒದಗಿಸುವುದು)

(ಈ) ಯಾವ ಕಾಲಮಿತಿಯೊಳಗೆ ಈ ಹಳ್ಳಗಳ ಅಗಲೀಕರಣ ಮತ್ತು ಹೂಳು ತೆಗೆಯಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದು ? (ಮಾಹಿತಿ ಒದಗಿಸುವುದು)

## ಕ್ರೀಡಾಂಗಣದ ವಿದ್ಯುತ್ ಬಿಲ್ ಪಾವತಿ

**ಶ್ರೀ ಮಂಜು ಹೆಚ್ ಟಿ (ಕೆ.ಆರ್.ಪೇಟೆ) –**

೮೩ (೧೮೧೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ತಾಲ್ಲೂಕು ಮತ್ತು ಒಳಾಂಗಣ ಕ್ರೀಡಾಂಗಣಗಳ ವಿದ್ಯುತ್ ಬಿಲ್ ಪಾವತಿ ಮಾಡಲು ಮತ್ತು ನಿರ್ವಹಣೆಗೆ ಕಳೆದ ಎರಡು ವರ್ಷದಲ್ಲಿ ಬಿಡುಗಡೆ ಮಾಡಲಾದ ಮತ್ತು ಬಳಕೆ ಮಾಡಲಾದ ಅನುದಾನ ಎಷ್ಟು ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಕ್ರೀಡಾಂಗಣ ನಿರ್ವಹಣೆ & ವಿದ್ಯುತ್ ಬಿಲ್ ಅನುದಾನವನ್ನು ಪ್ರತ್ಯೇಕವಾಗಿ ಮಾಹಿತಿ ಒದಗಿಸುವುದು)

(ಆ) ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದ ತಾಲ್ಲೂಕು ಕ್ರೀಡಾಂಗಣ/ಒಳಾಂಗಣ ಕ್ರೀಡಾಂಗಣದ ವಿದ್ಯುತ್ ಬಿಲ್ ಪಾವತಿ ಮಾಡದಿರುವುದರಿಂದ ಇಂಧನ ಇಲಾಖೆಯವರು ವಿದ್ಯುತ್ ಸರಬರಾಜು ಸ್ಥಗಿತ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ತಾಲ್ಲೂಕು ಕ್ರೀಡಾಂಗಣದ ವಿದ್ಯುತ್ ದೀಪಗಳ ಬಿಲ್ ಪಾವತಿ ಹಾಗೂ ನಿರ್ವಹಣೆ ಮಾಡದಿರುವುದರಿಂದ ಕ್ರೀಡಾಂಗಣದಲ್ಲಿ ರಾತ್ರಿ ಸಮಯದಲ್ಲಿ ಅನೈತಿಕ ಚಟುವಟಿಕೆಗಳಿಗೆ ಎಡೆ ಮಾಡಿಕೊಟ್ಟಿದ್ದು, ಇದರಿಂದ ಸಾರ್ವಜನಿಕರಿಗೆ ಕಿರಿಕಿರಿ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಈ ಕ್ರೀಡಾಂಗಣದ ನಿರ್ವಹಣೆಗೆ ಹಾಗೂ ಬಾಕಿ ವಿದ್ಯುತ್ ಬಿಲ್ ಪಾವತಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಪಿ.ಎಸ್.ಐ. ಹುದ್ದೆಗಳ ಆಯ್ಕೆಪಟ್ಟಿ

**ಶ್ರೀ ವಿಜಯೇಂದ್ರ ಯಡಿಯೂರಪ್ಪ (ಶಿಕಾರಿಪುರ) –**

೮೪ (೧೮೭೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೧ರಲ್ಲಿ ೪೦೨ ಪಿ.ಎಸ್.ಐ. ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಅದರಂತೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಹೊರಡಿಸಲಾಗಿದ್ದು ; ಈವರೆಗೂ ಯಾವುದೇ ಅಂತಿಮ ಪಟ್ಟಿಯನ್ನು ಹೊರಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಅಂತಿಮ ಆಯ್ಕೆ ಪಟ್ಟಿಯನ್ನು ಹೊರಡಿಸದೇ ಇರಲು ಕಾರಣವೇನು ;

(ಆ) ಸದರಿ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಯಾವ ಕಾಲಮಿತಿಯೊಳಗೆ ಹೊರಡಿಸಲಾಗುವುದು ? (ಸಂಪೂರ್ಣ ವಿವರ ಒದಗಿಸುವುದು)

## ಮಹದಾಯಿ ಕಳಸಾ ಬಂಡೂರಿ
## ಯೋಜನೆಯ ಕಾಮಗಾರಿ

**ಶ್ರೀ ಕೋನರೆಡ್ಡಿ ಎನ್ ಹೆಚ್ (ನವಲಗುಂದ) –**

೮೫ (೧೦೮೮) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹದಾಯಿ, ಕಳಸಾ ಬಂಡೂರಿ ಯೋಜನೆಯ ಕಾಮಗಾರಿಗೆ ಟೆಂಡರ್ ಕರೆದು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ್ದರೂ ಈವರೆಗೂ ಕಾಮಗಾರಿ ಪ್ರಾರಂಭಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ಪ್ರಾರಂಭಿಸದಿರಲು ಕಾರಣಗಳೇನು ;

(ಆ) ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಇಲಾಖೆಯ ವನ್ಯಜೀವಿ ಮಂಡಳಿಯಿಂದ ಈ ಕಾಮಗಾರಿಗೆ ಅನುಮತಿ ಪಡೆಯಲು ಸರ್ಕಾರ ಇಲ್ಲಿಯವರೆಗೆ ಯಾವ ಕ್ರಮಗಳನ್ನು ಕೈಗೊಂಡಿದೆ ; (ವಿವರಗಳನ್ನು ನೀಡುವುದು)

(ಇ) ಈ ಯೋಜನೆಗೆ ಶೀಘ್ರವಾಗಿ ಕೇಂದ್ರದಿಂದ ಅನುಮತಿ ಪಡೆಯಲು ಸರ್ವಪಕ್ಷ ನಿಯೋಗವನ್ನು ಕರೆದುಕೊಂಡು ಹೋಗಲು ಸರ್ಕಾರ ಕ್ರಮ ಕೈಗೊಳ್ಳುವುದೇ ? (ವಿವರ ನೀಡುವುದು)

## ಸಂಚಾರಿ ಠಾಣೆ ಸ್ಥಾಪನೆ

**ಡಾ॥ ಹೆಚ್ ಡಿ ರಂಗನಾಥ್ (ಕುಣಿಗಲ್) –**

೮೬ (೧೦೮೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕುಣಿಗಲ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ ೭೫ ಹಾದು ಹೋಗಿರುವ, ಕುಣಿಗಲ್ ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶವು ಸುಮಾರು ಒಂದು ಲಕ್ಷ ಜನ ಸಂಖ್ಯೆ ಹೊಂದಿರುವ ಪ್ರದೇಶಕ್ಕೆ ಸುಮಾರು ೫೦ ಸಿಬ್ಬಂದಿಯ ಒಂದೇ ಠಾಣೆಯಿದ್ದು, ಅಪಘಾತಗಳು ಹಾಗೂ ಅಪರಾಧಗಳು ದಿನೇ ದಿನೇ ಹೆಚ್ಚುತ್ತಿರುವುದು ಹಾಗೂ ಈ ಠಾಣೆಯಲ್ಲಿ ಸಿಬ್ಬಂದಿ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕುಣಿಗಲ್‌ನಲ್ಲಿ ಹೊಸದಾಗಿ ಸಂಚಾರಿ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆಗಳನ್ನು ಪ್ರಾರಂಭಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ಕೈಗೊಳ್ಳಲಾಗಿರುವ ಕಾಮಗಾರಿಗಳು

**ಡಾ॥ ಅವಿನಾಶ್ ಉಮೇಶ್ ಜಾಧವ್ (ಚಿಂಚೋಳಿ) –**

೮೭ (೧೯೯೪) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಂಚೋಳಿ ಮತಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಎಷ್ಟು ಕೆರೆಗಳಿವೆ ; (ವಿವರ ಒದಗಿಸುವುದು)

(ಆ) ಈ ಕೆರೆಗಳಿಂದ ಎಷ್ಟು ಎಕರೆ ಭೂ–ಪ್ರದೇಶಕ್ಕೆ ನೀರಾವರಿ ಒದಗಿಸಲಾಗುತ್ತಿದೆ ; ಕಳೆದ ೩ ವರ್ಷಗಳಿಂದ ಇಲ್ಲಿಯವರೆಗೆ ಕಲಬುರಗಿ ಜಿಲ್ಲೆಯಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಇಲ್ಲಿಯವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; ಬಾಕಿ ಬಿಡುಗಡೆ ಮಾಡಬೇಕಾದ ಅನುದಾನ ಎಷ್ಟು ; ಬಾಕಿ ಅನುದಾನ ಬಿಡುಗಡೆಗೆ ಸರ್ಕಾರ ಅನುಸರಿಸುವ ಮಾನದಂಡಗಳೇನು ; (ಕಾಮಗಾರಿವಾರು ಹಾಗೂ ಮತಕ್ಷೇತ್ರವಾರು ಸಂಪೂರ್ಣ ವಿವರ ಒದಗಿಸುವುದು)

(ಇ) ಈ ತಾಲ್ಲೂಕಿನ ನಾಗಇದಲಾಯಿ ಕೆರೆ ಬಿರುಕು ಬಿಟ್ಟಿದ್ದು ನೀರು ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಕೆರೆ ಹಾನಿಯಾಗುವ ಸಾಧ್ಯತೆಯಿರುವುದರಿಂದ ಈ ಕೆರೆ ಕೆಳಭಾಗದ ಗ್ರಾಮಸ್ಥರು ಆತಂಕದಲ್ಲಿದ್ದು ತುರ್ತಾಗಿ ಈ ಕೆರೆಯ ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ಸಂಪೂರ್ಣ ಮಾಹಿತಿ ಒದಗಿಸುವುದು)

## ನಾರಾಯಣಪುರ ಬಲದಂಡೆ ಕಾಲುವೆ

**ಶ್ರೀ ಬಸನಗೌಡ ದದ್ದಲ್ (ರಾಯಚೂರು ಗ್ರಾಮಾಂತರ) –**

೮೮ (೧೪೮೩) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ ೯೫ ರಿಂದ ೧೬೮ ರವರೆಗೆ ನಿರ್ಮಾಣ ಹಂತದಲ್ಲಿರುವ ೨ನೇ ಹಂತದ ಕಾಮಗಾರಿಯು ಯಾವ ಹಂತದಲ್ಲಿದೆ ; ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಎಷ್ಟು ಕಾಲಮಿತಿ ನಿಗದಿಪಡಿಸಲಾಗಿದೆ ;

(ಆ) ಈಗಾಗಲೇ ನಿರ್ಮಾಣಗೊಂಡ ಕಾಲುವೆಗಳಲ್ಲಿ ಸರ್ಕಾರವು ಯಾವ ಕಾಲಮಿತಿಯಲ್ಲಿ ನೀರನ್ನು ಹರಿಸಿ ಇಲ್ಲಿನ ರೈತರ ಭೂಮಿಗಳಿಗೆ ಯಾವಾಗ ನೀರು ಪೂರೈಸಲಾಗುವುದು ; (ಸಂಪೂರ್ಣ ವಿವರ ನೀಡುವುದು)

(ಇ) ಈ ಕಾಲುವೆ ಕಾಮಗಾರಿಗೆ ರೈತರಿಂದ ಭೂಸ್ವಾಧೀನಪಡಿಸಿಕೊಂಡ ಭೂಮಿ ಎಷ್ಟು ; ಈ ಪೈಕಿ ಎಷ್ಟು ರೈತರಿಗೆ ಪರಿಹಾರ ಧನ ನೀಡಲಾಗಿದೆ ;

(ಈ) ಇನ್ನೂ ಎಷ್ಟು ಜನರಿಗೆ ಪರಿಹಾರ ಧನ ನೀಡುವುದು ಬಾಕಿ ಇದೆ ; ಬಾಕಿ ಇರುವ ಪರಿಹಾರ ಧನ ಯಾವಾಗ ಪಾವತಿಸಲಾಗುವುದು ?

## ಅಂತರ್ಜಲ ಅಭಿವೃದ್ಧಿ ಕಾಮಗಾರಿಗಳು

**ಶ್ರೀ ರವಿಕುಮಾರಗೌಡ (ಗಣಿಗ) (ಮಂಡ್ಯ) –**

೮೯ (೧೦೭೬) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಅಂತರ್ಜಲ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ಒದಗಿಸುವುದು)

(ಆ) ಕಳೆದ ೦೨ ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಚೆಕ್‌ಡ್ಯಾಮ್‌ಗಳನ್ನು ನಿರ್ಮಾಣ ಮಾಡಲಾಗಿದೆ ಮತ್ತು ಸದರಿ ಚೆಕ್‌ಡ್ಯಾಮ್‌ಗಳಲ್ಲಿ ಸಂಗ್ರಹಿಸಲಾಗುತ್ತಿರುವ ನೀರಿನ ಪ್ರಮಾಣ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಕಳೆದ ೦೨ ವರ್ಷಗಳಿಂದ ಮಂಡ್ಯ ವಿಧಾನಸಭಾ ಕ್ಷೇತ್ರಕ್ಕೆ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ? (ವಿವರ ನೀಡುವುದು)

## BMICPA ಯೋಜನಾ ಪ್ರದೇಶಕ್ಕೆ ಸೇರ್ಪಡೆ

**ಶ್ರೀ ಉದಯ ಕೆ ಎಂ (ಮದ್ದೂರು) –**

೯೦ (೧೭೯೫) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮದ್ದೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳನ್ನು BMICPA ದಿಂದ ಹೊರತುಪಡಿಸಲು ಕೋರಿರುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ ; (ತಾಲ್ಲೂಕುವಾರು, ಗ್ರಾಮವಾರು ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಈ ಪ್ರಸ್ತಾವನೆಗೆ ಸರ್ಕಾರ ಈವರೆಗೆ ಅನುಮೋದನೆ ನೀಡದಿರಲು ಕಾರಣಗಳೇನು ;

(ಇ) ಈ ಗ್ರಾಮಗಳ ಮರು ಸೇರ್ಪಡೆ ವಿಳಂಬದಿಂದ ಸ್ಥಳೀಯ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಪ್ರಸ್ತಾವನೆಗೆ ಅನುಮೋದನೆ ನೀಡಿ ಈ ಗ್ರಾಮಗಳನ್ನು BDA ವ್ಯಾಪ್ತಿಗೆ ತರಲಾಗುವುದು ?

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು ಕಾ.ಸೂ–231 ಪ್ರತಿಗಳು – 800 – ಪಿ6

**List of Questions for Oral Answers**

**Total No. of Questions - 15**

# LIST - 06

# KARNATAKA LEGISLATIVE ASSEMBLY

## SIXTEENTH ASSEMBLY

## SEVENTH SESSION

## Tuesday, 19th August, 2025

---

**GROUP - 'B'**

1. Hon'ble Chief Minister
2. Hon'ble Deputy Chief Minister
3. Minister for Home
4. Minister for Law, Parliamentary Affairs and Legislation, Tourism
5. Minister for Excise
6. Minister for Minor Irrigation, Science and Technology

---

**NEW SUB-JAIL**

**SRI SHIVALINGE GOWDA K.M. (ARASIKERE) -**

76 (1484) Will the Minister for Home be pleased to state :-

(a) whether it has come to the notice of the Government that the existence of new sub-jail at Arasikere ;

(b) if so, the time by when the new sub-jail was inaugurated ; (information be furnished)

(c) the reason for not shifting the convicts / prisoners to the said jail even after so many years since its inauguration; if so, the time by when steps would be taken ?

**DEVELOPMENT OF KABINI RIGHT BANK CANAL CHAIN**

**SRI KRISHNAMURTHY A.R. (KOLLEGAL) -**

77 (1868) Will the Deputy Chief Minister be pleased to state:-

(a) the time by when the development work of Kabini right bank canal chain from 0.00km to 140.00km and remodeling work from 140.00km to 180.00km at the cost of 500.00 lakhs will be implemented ; (details be furnished)

(b) the time limit within which the said development work from 0.00km to 140.00km and remodeling work of 140.00km to 180.00km will be started and completed ; important stages of said work ;

(c) complete information regarding the Detailed Project Report (DPR) of said proposal and estimated cost, progress status and stages of completion of the works be furnished ?

**FILL THE LAKE WITH WATER**

**SRI KATAKDHOND VITTHAL DONDIBA (NAGTHAN) -**

78 (1066) Will the Minister for Minor Irrigation, Science and Technology be pleased to state :-

(a) the present status of the ambitious the Sankha lake water filling work (Hole Sankha) in Chadachana taluk of Vijayapura district ;

(b) whether it is true that the public and livestock are facing water scarcity in this very backward area, which receives very little rainfall ;

(c) if so, the steps taken by the Government to fill up the said lake and provide water to the people and livestock so far ;

(d) the time limit within which the said project would be completed ?

## NEW TALUK OFFICES

**SRI BASAWARAJ MATTIMUD (GULBARGA RURAL) -**

79 (1850) Will the Chief Minister be pleased to state :-

(a) whether necessary staff has been appointed to the taluk offices after the formation of new taluks in the State; whether it has come to the notice of the Government that there is a shortage of staff in said offices ; if so, the steps taken by the Government in this regard ; (information be furnished)

(b) whether there is a proposal before the Government to setup new taluk offices in Shahabad and Kamalapura taluk centre in the limits of Kalaburagi Rural Assembly Constituency ;

(c) if so, the steps taken by the Government to establish said office ; (details be furnished)

(d) particulars of the offices that have been started in the said taluk centers; the time by when will remaining offices be started ? (details be furnished)

## EXTENSION OF METRO RAIL SERVICE

**SRI SHIVANNA B. (ANEKAL) -**

80 (1097) Will the Deputy Chief Minister be pleased to state :-

(a) whether there is a proposal before the Government to extend the metro rail service from Bommasandra to Attibele of Anekal taluk ; (complete information be furnished)

(b) the time by when said extending metro rail service work would be started on this route ? (complete information be furnished)

## DETAILS OF GRANT

**SRI PUTTARANGASHETTY C. (CHAMARAJANAGAR) -**

81 (785) Will the Minister for Law and Parliamentary Affairs, Legislation and Tourism be pleased to state :-

(a) the quantum of grant that has been sanctioned by the Tourism department during the last three years to the Chamarajanagara Assembly Constituency ;

(b) the action taken by the Government to release grant for this constituency in the year 2025-26 ;

(c) the particulars of proposals received by the department from this constituency for release of grant ; the present status of these proposals ;

(d) the quantum of grant that has been sanctioned by the Government in the year 2024-25 to provide basic amenities to the areas covered by Tourism department ?

## FLOOD CONTROL OF BENNE HALLA AND MASTI HALLA

**SRI PATIL M.R. (KUNDGOL) -**

82 (1080) Will the Deputy Chief Minister be pleased to state :-

(a) whether it has come to the notice of the Government that the farmers are facing severe hardship due to the flooding of Benne and Masti Halla in Kundgol taluk of Dharwad district and that a farmer lost his life after being swept away in a stream along with his tractor near Hanchinala village during the floods that occurred last month ;

(b) if so, the steps taken by the Government for widening of these streams flowing in Kundgol taluk and prevent the flood by removing the silt ; (complete information be furnished)

(c) the particulars of programmes formulated by the Government to prevent the flood of these streams ; if not, the reasons there for; (information be furnished)

(d) the time limit within which the Government will take action to widen and remove the silt of these streams ? (information be furnished)

## ELECTRICITY BILL PAYMENT OF STADIUM

**SRI MANJU H.T. (K.R.PETE) -**

83 (1816) Will the Chief Minister be pleased to state :-

(a) the quantum of grant that has been released and utilized during the last two years for payment of electricity bill and maintenance of taluk stadiums and indoor stadiums across the State ; (district-wise

and taluk-wise, separate information be furnished regarding grant released for stadium maintenance and electricity bill)

(b) whether it has come to the notice of the Government that the Energy department has disconnected the electricity supply to the taluk stadium / indoor stadium due to non-payment of the electricity bill in K.R.Pete Assembly Constituency of Mandya district ;

(c) whether it has come to the notice of the Government that due to non-payment of the electricity bill and failure to carryout maintenance work, the taluk stadium has become a site for immoral activities at night, causing annoyance to the public ;

(d) if so, the steps taken by the Government to maintain this stadium and pay the outstanding electricity bill ?

## SELECTION LIST OF PSI POSTS

**SRI VIJAYENDRA YEDIYURAPPA (SHIKARIPURA) -**

84 (1874) Will the Minister for Home be pleased to state :-

(a) whether it has come to the notice of the Government that a notification was issued in 2021 for filling up of 402 PSI Posts and a provisional was published, but the final selection list has not been published so far ; if so, the reason for not publishing the final selection list ;

(b) the time limit within which the final selection list of the said posts would be published ? (complete details be furnished)

## COMMENCEMENT OF MAHADAYI KALASA BANDURI PROJECT WORK

**SRI KONAREDDI N.H. (NAVALGUND) -**

85 (1088) Will the Deputy Chief Minister be pleased to state :-

(a) whether it has come to the notice of the Government that despite calling for tender for the work of the Mahadayi, Kalasa Banduri project and issuing work order to the contractors, work has not yet commenced ; if so, the reasons for not commencing these works ;

(b) the action taken by the Government to obtain permission from the forest, environment and climate changes department of the Central Government ; (details be furnished)

(c) whether the Government will take steps to lead an all-party delegation to seek early approval from the Central Government for this project ? (details be furnished)

## ESTABLISHMENT OF TRAFFIC POLICE STATION

**Dr. RANGANATH H.D. (KUNIGAL) -**

86 (1084) Will the Minister for Home be pleased to state :-

(a) whether it has come to the notice of the Government that the Kunigal town and its rural areas have only one Police Station with 50 staff members to serve a population of around one lakh, through which National Haighway-75 passes and that due to a shortage of staff in this station the number of accidents and crimes is increasing day by day ;

(b) the steps taken by the Government to set up new traffic and rural police stations in Kunigal town ? (details be furnished)

**WORKS UNDERTAKEN**

**Dr. AVINASH UMESH JADHAV (CHINCHOLI)**

87 (1094) Will the Minister for Minor Irrigation, Science and Technology be pleased to state :-

(a) the number of lakes covered by the Minor Irrigation department in Chincholi Assembly Constituency ; (details be furnished)

(b) the extent of land, in acres, that is being irrigated by the said lakes ; the number of works have been undertaken in Kalaburgi district since last 3 years till date ; the quantum of grant has been released so far; the amount of grant pending for released; the criteria being followed by the Government to release the pending grant ; (work-wise and constituency-wise complete details be furnished)

(c) whether it has come to the notice of the Government that due to a crack in the embankment of the Nagaidalayi lake in this taluk, a large quantity of water is going to waste ; if so, the steps taken by the Government to undertake immediate repair work, in view of the possibility of damage to this lake and the concern of the villagers residing downstream ? (complete information be furnished)

**NARAYANPURA RIGHT BANK CANAL**

**SRI BASANAGOUDA DADDAL (RAICHUR RURAL) -**

88 (1483) Will the Deputy Chief Minister be pleased to state :-

(a) the present status of the construction work of the $2^{nd}$ phase of the Narayanpura right bank canal from 95 km to 168 km; the time line fixed for completion of said work ;

(b) the time by when the Government will release the water to already constructed canals and irrigated the farmers land ; (complete details be furnished)

(c) the extent of land that has been acquired from the farmers for the said canal work; the number of farmers to whom the compensation has been awarded ;

(d) the number of farmers are pending for compensation ; the time by when outstanding amount would be paid ?

## GROUNDWATER REVIVAL WORKS

**SRI RAVIKUMAR GOWDA (GANIGA) (MANDYA) -**

89 (1076) Will the Minister for Minor Irrigation, Science and Technology be pleased to state :-

(a) the steps taken by the department of Minor Irrigation for the augmentation of groundwater in the State ; (details be furnished)

(b) the number of check dams have been constructed in Mandya district during the last 2 years and the volume of water being stored in the said check dams ; (taluk-wise information be furnished)

(c) the particulars of works and the amount of grant that has been released for said works in the Mandya Assembly Constituency during the last 2 years ? (details be furnished)

## INCLUSION OF VILLAGES IN THE BMICPA PROJECT

**SRI UDAYA K.M. (MADDUR) -**

90 (1795) Will the Deputy Chief Minister be pleased to state :-

(a) whether it has come to the notice of the Government that proposal has been submitted, seeking the exclusion of villages falling in the limits of Maddur Assembly Constituency from BMICPA project ; (taluk-wise and village-wise details be furnished)

(b) if so, the reasons for the Government not approving said proposal so far ;

(c) whether it has come to the notice of the Government that local people are facing difficulties due to the delay in the re-inclusion of said villages ;

(d) if so, the time by when this proposal would be approved and the villages will brought under the limits of BMICPA project ?

**M.K. VISHALAKSHI**
Secretary
Karnataka Legislative Assembly

Government Press, Vikasa Soudha Unit, Bengaluru, WD-268- Copies - 800 - P2